

ಚಾಂಗ್ ಮಾಯ್‌ನಲ್ಲಿರುವ
'ವಾತ್ ಚೆದ್ ಯಾತ್'

# ಥಾಯ್ಲೆಂಡಿನಲ್ಲೊಂದು ಮಹಾಬೋಧಿ ಮಂದಿರ

**ಸುಖಲೋಲುಪತೆ ಹಾಗೂ ಪ್ರಾಚೀನ ಪರಂಪರೆ, ಎರಡಕ್ಕೂ ಸಾಕ್ಷಿಯಾದ ಥಾಯ್ಲೆಂಡಿನ ಚಾಂಗ್ ಮಾಯ್ ಪಟ್ಟಣದ ಪ್ರಮುಖ ಆಕರ್ಷಣೆ ಅಲ್ಲಿನ ಮಹಾಬೋಧಿ ಮಂದಿರ. ಬುದ್ಧ ಗುರುವಿನ ಕಥನಗಳನ್ನು ಅಡಿಗಡಿಗೆ ಉಸುರುವ ಆ ಮಂದಿರ, ಪ್ರವಾಸಿಗರ ಚುಂಬಕ ಸ್ಥಳ.**

**■ ಆನಂದತೀರ್ಥ ಪ್ಯಾಟಿ**

'ನಿಮ್ಮಲ್ಲಿರುವ ಬೋಧಗಯಾದ ಮಹಾಬೋಧಿ ಮಂದಿರವನ್ನು ಯಾರೆಲ್ಲ ನೋಡಿದ್ದೀರಿ' ಎಂದು ಸ್ನೇಹಿತ ಮೈಕೆಲ್ ಕಾಮನ್ಸ್ ಪ್ರಶ್ನೆ ಮಾಡಿದಾಗ, ನಮ್ಮ ತಂಡದ ಕೆಲವರು ಮಾತ್ರ ಕೈ ಮೇಲೆತ್ತಿದರು! 'ಹಾಗಿದ್ದರೆ ನೀವಿಲ್ಲೇ ಇರಿ. ಉಳಿದವರಿಗೆ ಇಲ್ಲಿರುವ ಮಹಾಬೋಧಿ ಮಂದಿರ ತೋರಿಸಿಕೊಂಡು ಬರುವೆ' ಎಂದು ಚಟಾಕಿ ಹಾರಿಸಿದ ಮೈಕೆಲ್, ವಾಹನ ಚಾಲಕನಿಗೆ 'ವಾತ್ ಚೆದ್ ಯಾತ್' ಎಂದು ಸೂಚಿಸಿದರು.

ರೈತ ಮಾರುಕಟ್ಟೆಗಳ ಅಧ್ಯಯನಕ್ಕೆಂದು ಥಾಯ್ಲೆಂಡಿಗೆ ಬಂದಿಳಿದ ಮರುದಿನವೇ 'ದೇಗುಲ ದರ್ಶನ'ದೊಂದಿಗೆ ಪ್ರವಾಸ ಶುರುಮಾಡುವ ಯೋಜನೆಯನ್ನು ಮೈಕೆಲ್ ರೂಪಿಸಿದ್ದರು! ದೇವಸ್ಥಾನ ಹೇಗಿರಬಹುದೆಂಬ ನಮ್ಮ ಕಲ್ಪನೆಗೆ ವಿಭಿನ್ನವಾಗಿತ್ತು, ಚಾಂಗ್ ಮಾಯ್ ಮಹಾನಗರದಲ್ಲಿನ 'ವಾತ್ ಚೆದ್ ಯಾತ್'.

ಬೌದ್ಧಮಂದಿರದ ಎಲ್ಲ ಗುಣಲಕ್ಷಣಗಳ ಜತೆ ವಿಹಾರದ ತಾಣವಾಗಿಯೂ ರೂಪುಗೊಂಡ ಸ್ಥಳ ಅದು. ಹೀಗಾಗಿ ಬೌದ್ಧಸನ್ಯಾಸಿಗಳ ಧ್ಯಾನದ ಜತೆಜತೆಗೇ, ದೇಶ ವಿದೇಶಗಳ ಪ್ರವಾಸಿಗರು ತಿಂಡಿ–ತಿನಿಸು ಸವಿಯುತ್ತ ವಿಹರಿಸುವ ಪ್ರವಾಸಿ ತಾಣವಾಗೂ ಪ್ರಸಿದ್ಧಿ ಪಡೆದಿದೆ. ಸ್ಥಳೀಯರಿಗಂತೂ



ಅರಸ ತಿಲೋಕರಥನ ಸ್ಮರಣೆಯಲ್ಲಿ ಸ್ಥಾಪಿಸಿದ ಸ್ತೂಪ